Sl.No.

Code No. 5006

**HSE EXAMINATION- ~~2016~~ 2017**

**ANSWER KEY**

**SUBJECT : KANNADA (LANGUAGE)**

**Time: 2½ Hrs** **Total Marks: 80**

80

| Q.No. | Answer/ Value Points | Score | Total |
|---|---|---|---|
| 1 | ಅಗ್ನಿ ಪರ್ವ | 1 | 1 |
| 2 | ಲೋಪ ಸಂಧಿ | 1 | 1 |
| 3 | ತತ್ಪುರುಷ ಸಮಾಸ | 1 | 1 |
| 4 | ಸಾಹಸ ಭೀಮ ವಿಜಯ | 1 | 1 |
| 5 | 1. ಪಂಚಮಿ 2. ಸಂಸ್ಕಾರ 3. ಮೆರವಣಿಗೆ 4. ಕಾಕನ ಕೋಟೆ | 4 | 4 |
| 6 | ಸಮುದ್ರ, ಹೇಡಿ | 1 | 1 |
| 7 | ಶಿವ. ಶಂಕರ, ಈಶ್ವರ | 1 | 1 |
| 8 | ಪರಿದು ಮರ | 1 | 1 |
| 9 | ಮೊಗ,ನಿಚ್ಚ | 1 | 1 |
| 10 | ನೆಂಟರ ಮನೆಯಲ್ಲಿ ನಡೆಯುವ ಸಮಾರಂಭಕ್ಕೆ ಅಕ್ಕರೆಯಿಂದ ಕರೆಯುತ್ತಾರೆ<br>ಕಾಗೆ ತನ್ನ ಬಳಗನ್ನು ಕೂಗಿ ಕರೆಯಿತು<br>ಅರ್ಥವತ್ತಾದ ವಾಕ್ಯವನ್ನು ರಚಿಸಿದ್ದರೆ | 2 | 2 |
| 11 | "ಥೂತ್ತೇರಿ, ನಾನ್ಯಾಕೆ ಕೊಡ್ಲಿ. ಬಂದು ನೋಡಿ" ಎಂದು ಪ್ಯಾರ ಆಚೆ ದಡದಿಂದ ಕೂಗಿದ. ನಾನು ಹತ್ತಿರ ಹೋದಾಗ ಯಾವ ವಾಸನೆಯೂ ಬರಲಿಲ್ಲ, ಪ್ಯಾರ ಮುಖ ಮುಚ್ಚಿ ಹಿಡಿದಿದ್ದ ಮೂಗನ್ನು ತೆರೆದು ಗಾಳಿ ಎಳೆದುಕೊಂಡು 'ಅರೆ ಇಸ್ಕಿ! ಎಲ್ಲೋಯ್ತು ವಾಸ್ನೆ!' ಎಂದ. | 2 | 2 |
| 12 | ಅ) ಪಾತ್ರಗಳ ಗುಣಸ್ವಭಾವಕ್ಕೆ ಹೊಂದಿಕೊಂಡು ಸಂಭಾಷಣೆಯ ರಚನೆ ಸನ್ನಿವೇಶದ ಪರಿಕಲ್ಪನೆ ಸರಳ ಪದ ಬಳಕೆ, ಆಕರ್ಷಣೆಯಿಂದ ಕೂಡಿದ ಸಂಭಾಷಣೆ, ಪ್ರೇಕ್ಷಕನ ಮೇಲೆ ಪರಿಣಾಮ ಬೀರುವಂತಿರಬೇಕು<br>ಭಾಷಾ ಶೈಲಿಗೆ<br>ಆ) ಸಿನೆಮಾ ತಯಾರಿಕೆಯ ಕೊನೆಯ ಹಂತ ಚಿತ್ರವನ್ನು ಬೇಕಾದಂತೆ ಜೋಡಿಸುವ ಕಲೆ ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಚಿತ್ರೀಕರಣವನ್ನು ಕ್ರಮಬದ್ಧವಾಗಿ ಜೋಡಿಸಬಹುದು | 2<br>1 | 3 |
| 13 | ದುಡಿಮೆಯ ಮಹತ್ವನ್ನು ಇದು ಹೇಳುತ್ತದೆ –ಇದು ಹಿರಿಯರ ಅನುಭವದಿಂದ ಬಂದ ಮಾತು– ದುಡಿಮೆಯಲ್ಲಿ ನಂಬಿಕೆ ಇಡು ದೇವರನ್ನು ಗುಡಿಗಳಲ್ಲಿ ಕಣುವುದರ ಬದಲಗಿ ನಿನ್ನ ದುಡಿಮೆಯನ್ನೇ ದೇವರೆಂದು ತಿಳಿದಾಗ ಬದುಕು ಹಸನಾಗುತ್ತದೆ ಅದರಲ್ಲೇ ಬಾಳಿನ ಬೆಳಕು ಇದೆ<br>ಭಾಷಾ ಶೈಲಿಗೆ | 3<br>1 | 4 |
| 14 | ಅಂದು ರಾತ್ರಿ ನಾನು ಕೋಣೆಯಲ್ಲಿ ಅತ್ತಿಂದಿತ್ತ ನಡೆದಾಡುತಿದ್ದೆ, ಮೇರಿ ಐರಿನಳ ಉಡುಪೊಂದನ್ನು ಹೊಲಿಯುತ್ತಾ ಕುಳಿತ್ತಿದ್ದಳು. ಮೇರಿ ಎಂದೂ ಸಿದ್ಧ ಉಡುಪು ಕೊಳ್ಳತ್ತಿರಲಿಲ್ಲ. ಅವು ತಿರಾ ದುಬಾರಿ, ಕೇವಲ ಆಲಂಕಾರಿಕ ಅನಿಸಿತ್ತು. ಹಾಗಾಗಿ ತನ್ನದೇ ವಿನ್ಯಾಸಗಳನ್ನು ಪ್ರಯೋಗಿಸಿ ಮನೆಯಲ್ಲೇಹೊಲಿದು ಕೊಡುವಳು. ಆದರೆ ಆ ಸಂಜೆ ಹೊಲಿವ ಕೈಗಳ ಗಮನ ಉಡುಪಿನ ಮೇಲಿರಲಿಲ್ಲ. ತಟ್ಟನೆ ಎದ್ದವಳು, ನನ್ನನ್ನು ಕೇಳಿದಳು | | |

| | | | |
|---|---|---|---|
| | 'ನಾವಲ್ಲಿಗೆ ಹೋದರೆ ಹೇಗೆ'? ಎಲ್ಲಿಗೆ, ಏಕೆ ಎಂಬ ಪ್ರಶ್ನೆಗಳಿರಲಿಲ್ಲ. ಹೇಳದೆಯೇ ಅರ್ಥವಾಗುವಂಥಾ ಸಂಪರ್ಕವೇರ್ಪಟ್ಟಿತು ನಮ್ಮಿಬ್ಬರ ನಡುವೆ. ನನ್ನ ಮನಸ್ಸೂ ತುಡಿಯುತ್ತಿತ್ತು. ಈಗಷ್ಟೇ ನಾವು ಜನ್ಮ ಕೊಟ್ಟ ರೇಡಿಯಂ ಆಗಷ್ಟೇ ಹುಟ್ಟಿದ ಕಂದಮ್ಮನಂತೆ ಆಕರ್ಷಿಸಿತ್ತು. ಆ ರಾತ್ರಿಯ ವೇಳೆಯಲ್ಲಿ ಹೆಜ್ಜೆ ಹಾಕಿದರು<br>ಹೀಗೆ ಸರಿಯಾಗಿ ಬರೆದಿದ್ದರೆ | 4 | 4 |
| 15 | ಜಾಲಿಯ ಮರವು ಮುಳ್ಳಿನ ಕಂತೆ. ದಣಿದು ಬಂದವರಿಗೆ ನೆರಳು ಕೊಡುವುದಿಲ್ಲ. ಹಸಿದು ಬಂದವರಿಗೆ ಹಣ್ಣುಕೊಡುವುದಿಲ್ಲ. ಹೂವು ಕೂಡ ಇಲ್ಲದ ಸುವಾಸನೆ ಇಲ್ಲದ ಪಷದಂತೆ ಇರುವ ನಿಷ್ಪ್ರಯೋಜಕ ಮರ.<br>ಭಾಷಾ ಶೈಲಿಗೆ | 3<br>1 | 4 |
| 16 | ಸರಿಯಾಗಿ ಪ್ರಸ್ತಾರವನ್ನು ಹಾಕಿದ್ದರೆ<br>ಗಣಗಳನ್ನು ಸರಿಯಾಗಿ ವಿಭಜಿಸಿದ್ದರೆ<br>ಮತ್ತೇಭವಿಕ್ರೀಡಿತ ಎಂದು ಛಂದಸ್ಸನ್ನು ಹೆಸರಿಸಿದ್ದರೆ | 2<br>1<br>1 | 4 |
| 17 | ಸಿದ್ದಲಿಂಗಯ್ಯ, ನಟರ ಆಯ್ಕೆ, ತಾಂತ್ರಿಕತೆ ಪರಿಪೂರ್ಣ ಬಳಕೆ, ಹಳ್ಳಿ ಬದುಕನ್ನು ಚಿತ್ರಿಸಿದ ರೀತಿ ದೃಶ್ಯಗಳನ್ನು ಕಲಾತ್ಮಕವಾಗಿ ಸೆರೆ ಹಿಡಿಯುವುದು, ನಿರ್ದೇಶಕನ ಕನಸನ್ನು ಚಿತ್ರರೂಪಕ್ಕೆ ಇಳಿಸುವುದು, ಲೆನ್ಸ್, ಲೈಟ್ ಬಳಸುವ ಕಲೆಗಾರಿಕೆ, ಹಾಡು, ಫೈಟ್ ಸಂದರ್ಭಗಳ ಚಿತ್ರೀಕರಣದಲ್ಲಿ ಬಳಸುವ ತಂತ್ರ ಹಾಗೂ ಚಾಣಾಕ್ಷತೆ ಇತ್ಯಾದಿ ಅಂಶಗಳು | 4 | 4 |
| 18 | ಬಚ್ಚಲ ಒಲೆ ಉರಿಸಿ ನೀರು ಕಾಯಿಸಲು ದಿನವಿಡೀ ತಯಾರಿ ಮಾಡುವ ಅಪ್ಪನ ಹೆರೆದು ಬಿಟ್ಟ ಗೆರಟೆ, ತೆಂಗಿನ ಸಿಪ್ಪೆ, ಒಣಗಿದ ಮಾವಿನೆಲೆ, ಹಳೆ ಪೇಪರು, ಹಾಳುಮೂಳು ಕೆಲಸಕ್ಕೆ ಬಾರದ ವಸ್ತುಗಳ ಸಂಗ್ರಹ–ಅಪ್ಪನ ಸ್ಥಿತಿಯನ್ನು ಕಂಡು ಮಗ ಹೇಳುವ ಮಾತು ಆರಾಮ ಜೀವನವನ್ನು ಮಾಡಬಾರದೇಕೆ ಎಂಬ ಮಗನ ಪ್ರಶ್ನೆ– ಮಗನಿಗೆ ನೀಡುವ ಉತ್ತರ ಇತ್ಯಾದಿ ಅಂಶಗಳನ್ನು ಅವರದೇ ಮಾತುಗಳಲ್ಲಿ ಬರೆದಿದ್ದರೆ ಭಾಷಾ ಶೈಲಿ | 4<br>1 | 5 |
| 19 | ತಾಯಿಯ ಕೂಡಿಕೆಯ ಸಂಬಂಧವನ್ನು ವಿರೋಧಿಸಿ ಮನೆ ಬಿಟ್ಟು ಹೋದ ಚೆಲುವ– ತಾಯಿ ಮಗನಿಗಾಗಿ ಸದಾ ಹಂಬಲಿಸುವುದು– ಮಗನ ನೆನಪು ಮಾಡುವುದು– ಕಣ್ಣೀರು ಸುರಿಸುವುದು– ಮಗನಿಗಾಗಿ ದಾರಿ ಕಾಯುವುದು– ಕಿರಿಯ ಮಗನಿಗೆ ಸಾಂಕೇತಿಕವಾದ ಕಥೆಯನ್ನು ಹೇಳುವುದು, ನಿದ್ದೆಯಲ್ಲಿಯೂ ಮಗನಿಗಾಗಿ ಕನವರಿಸುವುದು ಹೀಗೆ ತಾಯಿಯ ವಾತ್ಸಲ್ಯವನ್ನು 'ತಾಯಿ' ಕಥೆಯ ಆಧಾರದಲ್ಲಿ ವಿಶ್ಲೇಷಿಸಿ ಬರೆದಿದ್ದರೆ<br>ಭಾಷೆ ಮತ್ತು ಶೈಲಿಗೆ | 4<br>1 | 5 |
| 20 | ಪರಿಸರ ಕುರಿತಾದ ವ್ಯಾಖ್ಯೆ, ಮಾಲಿನ್ಯಕ್ಕೆ ಕಾರಣಗಳು ಪರಿಸರ ಸಂರಕ್ಷಣೆಯ ಅಗತ್ಯ, ಅಪೂರ್ವ ಜೀವಿಗಳ ವಂಶನಾಶ –ಕೈಗೊಳ್ಳಬಹುದಾದ ಕ್ರಮಗಳು–ವಿದ್ಯಾರ್ಥಿಗಳ ಪಾತ್ರ ಇತ್ಯಾದಿ<br>ಭಾಷೆ ಮತ್ತು ಶೈಲಿಗೆ | 4<br>1 | 5 |
| 21 | ದಲಿತರು ಬೆಟ್ಟದಂತೆ ಬರುವುದು, ಊರ ತುಂಬ ಹರಿವುದು, ಹುಲಿಸಿಂಹಗಳಂತೆ ಗರ್ಜಿಸುವುದು, ಆಕಾಶಕ್ಕೆ ನೆಗೆವುದು, ಧಿಕ್ಕಾರ ಕೂಗುವುದು, ಎಲ್ಲ ಕಡೆಗಳಿಗೆ ನೀರಿನಂತೆ ಆವರಿಸಿಕೊಳ್ಳುವುದು, ಕ್ರಾಂತಿಯ ಬಿರುಗಾಳಿಯನ್ನು ಎಬ್ಬಿಸುವುದು ಇತ್ಯಾದಿ ಅಂಶಗಳನ್ನು ಉಲ್ಲೇಖಿಸಿ ದಲಿತರ ಹೋರಾಟದ ಒಗ್ಗಟ್ಟಿನ ಆಶಯವನ್ನು ಬರೆದಿದ್ದರೆ,<br>ಭಾಷೆ ಮತ್ತು ಶೈಲಿಗೆ | 4<br>1 | 5 |

| | | | |
|---|---|---|---|
| 22 | ಮೇರುಗಿರಿಯ ದಕ್ಷಿಣದಲ್ಲಿ ಶೋಭಿಸುವ ಕನ್ನಡನಾಡಿನ ವರ್ಣನೆ– ಕಾವೇರಿಯಿಂದ ಗೋದಾವರಿ ವರೆಗಿನ ವಿಸ್ತಾರ– ಭೂದೇವಿ ಉಟ್ಟ ಸೀರೆಗಳಂತೆ ಕಂಗೊಳಿಸುವ ನದಿಗಳು– ನಂದನವನದಂತೆ ಶೋಭಿಸುವ ಕೃಷಿಭೂಮಿ– ತೆಂಗುಕಂಗುಬಾಳೆಮಾವು ಫಲವೃಕ್ಷಗಳ ಸಮೃದ್ಧಿ– ಹಕ್ಕಿಗಳ ಇಂಚರದಿಂದ ಕೂಡಿದ ಸರೋವರಗಳು– ಅರವಟ್ಟಿಗೆಯಲ್ಲಿ ನೀರು ಕೊಡುವ ನೀರೆಯರ ಸೊಬಗು– ವೀರರು ಬದುಕಿದ ನೆಲ– ಸಾಹಿತ್ಯ ಸಂಗೀತ ಕಲಾಪ್ರೌಢಿಮೆಗೆ ಹೆಸರಾದ ನಾಡು ಇತ್ಯಾದಿ ಅಂಶಗಳನ್ನು ಪಾಠದಿಂದ ಉಲ್ಲೇಖಿಸಿ ಬರೆದಿದ್ದರೆ, | 4<br>1 | 5 |
| 23 | ಅರಿವಿಲ್ಲದೆ ಸುಮ್ಮನೆ ಮಾತಾಡಿ ಫಲವಿಲ್ಲ– ಜ್ಞಾನಿಯು ಜಗತ್ತಿಗೆ ಕನ್ನಡಿಯಾಗುವನು– ತನ್ನ ದೋಷಗಳು ತನ್ನ ಕಣ್ಣಿಗೆ ಬೀಳದು, ಇತರರು ಗುರುತಿಸುವರು– ಒಂದೇ ಭೂಮಿ, ಒಂದೇ ನೀರು, ಒಂದೇ ಗಾಳಿಯನ್ನು ಸೇವಿಸುವ ಮನುಜರಲ್ಲಿ ಕುಲಗೋತ್ರ ಭೇದಗಳು ಯಾಕೆ?– ಹೀಗೆ ಬದುಕಿಗೆ ಸಂಬಂಧಪಟ್ಟ ಜ್ಞಾನ, ಸತ್ಯ, ನೀತಿಗಳ ಕುರಿತು ಸರ್ವಜ್ಞನ ಮಾತುಗಳನ್ನು ಉಲ್ಲೇಖಿಸಿ ಪ್ರಬಂಧವನ್ನು ಬರೆದಿದ್ದರೆ,<br>ಪ್ರಬಂಧದ ಸ್ವರೂಪ, ಭಾಷೆ ಮತ್ತು ಶೈಲಿಗೆ | 6<br>2 | 8 |
| | ಸುಬ್ಬಣ್ಣ ವೈರಾಗ್ಯದಿಂದ ಪಿಟೀಲನ್ನು ನದಿಯ ನೀರಿನಲ್ಲಿ ತೇಲಿ ಬಿಡುವುದು, ಅನಂತರ ಅದಕ್ಕಾಗಿ ದು:ಖಿಸುವುದು, ರಾತ್ರಿಯಿಡೀ ಪಿಟೀಲಿನ ಕುರಿತು ಚಿಂತಿಸುವುದು, ವೆಂಕಟರಮಣ ಪಿಟೀಲು ತಂದು ಕೊಟ್ಟಾಗ ಸಂತಸಗೊಂಡದ್ದು, ಅವನಿಗೆ ಪಿಟೀಲು ಕಲಿಸುವುದು, ಪ್ರತಿಫಲವನ್ನು ಸ್ವೀಕರಿಸಲು ನಿರಾಕರಿಸುವುದು, ಇತ್ಯಾದಿ ಅಂಶಗಳು<br>ಭಾಷೆ ಮತ್ತು ಶೈಲಿಗೆ | 6<br>2 | 8 |
| 24 | ಸಿನಿಮಾ ಕಥೆ, ಚಿತ್ರ ಕಥೆ, ಸಂಭಾಷಣೆ, ಸಂಗೀತ, ಛಾಯಾಚಿತ್ರ, ಅಭಿನಯ, ವೇಷಭೂಷಣ,ಸಂಕಲನ ಇತ್ಯಾದಿ ಅಂಶಗಳು ಬಂದಿದ್ದರೆ<br>ಭಾಷೆ ಮತ್ತು ಶೈಲಿಗೆ | 6<br>2 | 8 |
| | ಧೃತರಾಷ್ಟ್ರ, ಸಂಜಯರು ದುರ್ಯೋಧನನಿಗೆ ಧರ್ಮರಾಯನೊಡನೆ ಸಂಧಿ ಮಾಡುವಂತೆ ತಿಳಿಸಿದಾಗ ಆತನ ಪ್ರತಿಕ್ರಿಯೆಯ ಮಾತುಗಳು– ಒಡಹುಟ್ಟಿದ ನೂರ್ವರನ್ನೂ ಕಳಕೊಂಡಿದ್ದೇನೆ ಇನ್ನು ಸಂಧಿ ಮಾಡಿ ಜೀವಿಸುವ ಆಸೆ ನನಗಿಲ್ಲ– ಪಾಂಡವರಲ್ಲಿ ಯುದ್ಧವೇ ಮಾಡುತ್ತೇನೆ ಎಂಬ ನಿರ್ಧಾರ. ಭೀಮ-ಅರ್ಜುನರಲ್ಲಿ ಹಗೆಯನ್ನು ತೀರಿಸಿಕೊಳ್ಳುತ್ತೇನೆ ಇತ್ಯಾದಿ ಅಂಶಗಳು ಬಂದಿದ್ದರೆ<br>ಭಾಷೆ ಮತ್ತು ಶೈಲಿಗೆ | 6<br>2 | 8 |